**<u>ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಗುಬ್ಬಿ</u>**

**ಓ ಎಸ್ ನಂ.390/2019 ಪಿ.ಡಬ್ಲು: 1**

**<u>ದಿನಾಂಕ: 24.09.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು: ಪ್ರತಿವಾದಿಗಳ ಪರ ವಕೀಲರಾದ ಶ್ರೀ. KGN ರವರಿಂದ:</u>**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿರುವ ವಿಚಾರಗಳನ್ನು ನಾನೇ ಹೇಳಿ ಬರೆಸಿರುತ್ತೇನೆ ಮತ್ತು ಅದನ್ನು ತಿಳಿದುಕೊಂಡಿರುತ್ತೇನೆ. ದಾವಾಸ್ವತ್ತಿನ ಹಳೆ ಸ.ನಂ.2/11, ಹೊಸ ಸ.ನಂ.28/1, 29/2 ಮತ್ತು 23/2ಎ, ಅದರ ವಿಸ್ತೀರ್ಣ 2 ಎಕರೆ. ದಾವಾಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ ಜಯಮ್ಮ ಮತ್ತು ನಂಜಮ್ಮ, ಪಶ್ಚಿಮಕ್ಕೆ ಸಂಪಿಗೆ ರಸ್ತೆ ಮತ್ತು ರಂಗಯ್ಯ ರವರ ಜಮೀನು, ಉತ್ತರಕ್ಕೆ ಕೆಂಚರಾಯ ಸ್ವಾಮಿ ದೇವಸ್ಥಾನದ ಕೊಡುಗೆ ಜಮೀನು, ದಕ್ಷಿಣಕ್ಕೆ ಕರಿಯಪ್ಪರವರ ಜಮೀನು. ನನ್ನ ತಂದೆ ದಾವಾಸ್ವತ್ತನ್ನು ದಿ: 03.05.1976 ರ ನೊಂದಾಯಿತ ಕ್ರಯ ಪತ್ರದ ಮುಖಾಂತರ ಕರಿಯಮ್ಮ ಮತ್ತು ಭದ್ರಕಾಳಮ್ಮ ಎನ್ನುವವರಿಂದ ಖರೀದಿಸಿರುತ್ತಾರೆ. ಸದರಿ ಅವರಿಬ್ಬರಿಗೂ ದಾವಾಸ್ವತ್ತಿನಲ್ಲಿ ತಲಾ 1 ಎಕರೆ ಜಮೀನು ವಿಭಾಗದ ಮುಖಾಂತರ ಬಂದಿರುತ್ತದೆ. ನನ್ನ ತಂದೆ ತಾಯಿಗೆ ನಾನು, 2 ಮತ್ತು 4ನೇ ವಾದಿಗಳು ಮಕ್ಕಳಿರುತ್ತಾರೆ. 1976 ರ ನೊಂದಾಯಿತ ಕ್ರಯ ಪತ್ರದ ನಂತರ ನನ್ನ ತಂದೆ ಸಿದ್ದಲಿಂಗಯ್ಯರವರಿಗೆ ಲೋಕ ಜ್ಞಾನ ಇಲ್ಲದಿರುವುದರಿಂದ ದಾವಾಸ್ವತ್ತಿನ ಖಾತೆ ಪಹಣಿ ತನ್ನ ಹೆಸರಿಗೆ ವರ್ಗಾಯಿಸಿಕೊಂಡಿರುವುದಿಲ್ಲ, ಅದನ್ನು ಈಗ ನಮ್ಮ ಹೆಸರಿಗೆ ವರ್ಗಾಯಿಸಿಕೊಳ್ಳಲು ನಾವು ಮುಂದಾದಾಗ ಕರಿಯಮ್ಮ ರವರ ವಾರಸುದಾರರು ಮತ್ತು 3ನೇ ಪ್ರತಿವಾದಿ ಅದಕ್ಕೆ ಅಡ್ಡಿಪಡಿಸಿದ್ದು ಈ ದಾವೆಯನ್ನು ಸಲ್ಲಿಸಿರುತ್ತೇನೆ. ಸಂಬಂಧಪಟ್ಟ ಇಲಾಖೆಯಿಂದ ದಾವಾಸ್ವತ್ತಿನ ಖಾತೆ ಮತ್ತು ಪಹಣಿಯನ್ನು ನನ್ನ ತಂದೆ ಅಥವಾ ನಮ್ಮಗಳ ಹೆಸರಿಗೆ ವರ್ಗಾಯಿಸಿಕೊಳ್ಳಲು ನನ್ನ ತಂದೆಯಾಗಲೀ, ನಾನು ಅಥವಾ ಇತರೇ ವಾದಿಗಳಾಗಲೀ ಪ್ರಯತ್ನಿಸಿಲ್ಲ ಎಂದರೆ

ಸಾಕ್ಷಿ ನಾವುಗಳು ವರ್ಗಾಯಿಸಿಕೊಳ್ಳಲು ಪ್ರಯತ್ನಪಟ್ಟಾಗಾ ಪ್ರತಿವಾದಿಗಳು ಅಡ್ಡಿಪಡಿಸಿರುತ್ತಾರೆ ಎನ್ನುತ್ತಾರೆ.

ಕರಿಯಮ್ಮ ಅಥವಾ 3 ನೇ ಪ್ರತಿವಾದಿ ಎಂದಿಗೂ ಮೇಲ್ಕಂಡ 1976 ರ ಕ್ರಯ ಪತ್ರದ ಮುಖಾಂತರ ದಾವಾಸ್ವತ್ತನ್ನು ನನ್ನ ತಂದೆಯ ಹೆಸರಿಗೆ ಕ್ರಯ ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ. ನಾವುಗಳು ಎಂದಿಗೂ ದಾವಾಸ್ವತ್ತಿನ ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಕರಿಯಮ್ಮ ಮತ್ತು 3 ನೇ ಪ್ರತಿವಾದಿ ಮತ್ತು ಜಯಮ್ಮ ಎನ್ನುವವರು ಯಾವ ಇಸವಿಯಲ್ಲಿ ವಿಭಾಗ ಮಾಡಿಕೊಂಡಿರುತ್ತಾರೆ ಎಂದು ನನಗೆ ನಿರ್ಧಿಷ್ಟವಾಗಿ ಗೊತ್ತಿಲ್ಲ ಸಾಕ್ಷಿ ಮುಂದುವರೆದು ಅವರುಗಳ ತಂದೆ ವೆಂಕಟರಾಮಯ್ಯರವರು ನಿಧನವಾದ ನಂತರ ವಿಭಾಗ ಮಾಡಿಕೊಂಡಿರುತ್ತಾರೆ ಎನ್ನುತ್ತಾರೆ. ದಾವಾಸ್ವತ್ತಿಗೆ ಸ್ವಾಧೀನದಲ್ಲಿ ನನ್ನ ತಂದೆಯಾಗಲೀ ಅಥವಾ ನಾವಾಗಲೀ ಇದಿದ್ದರೇ ನಿಪಿ.2 ರಿಂದ 5 ಪಹಣಿ ಪತ್ರಿಕೆಗಳ ಅನುಭವದ ಕಾಲಂ ನಲ್ಲಿ ನನ್ನ ತಂದೆಗಾಗಲೀ ಅಥವಾ ನಮ್ಮಗಳಿಗಾಗಲೀ ಹೆಸರು ನಮೂದಾಗಿರುತ್ತಿತ್ತು ಎಂದರೆ ಸಾಕ್ಷಿ 1976 ರಿಂದ ನಾವೇ ದಾವಾಸ್ವತ್ತಿನ ಅನುಭವದಲ್ಲಿ ಇರುತ್ತೇವೆ ಎನ್ನುತ್ತಾರೆ. ದಾವಾಸ್ವತ್ತಿನ ಕಂದಾಯವನ್ನು ಪಾವತಿಸಿದ ರಶೀದಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನನ್ನ ತಂದೆಯ ಹೆಸರಿಗೆ 1976 ಯಾವುದೇ ಕ್ರಯ ಪತ್ರ ದಾವಾಸ್ವತ್ತಿಗೆ ಸಂಬಂಧಿಸಿದಂತೆ ಆಗದೇ ಇದ್ದರೂ ನಿಪಿ.1 ಅನ್ನು ಸೃಷ್ಟಿಸಿಕೊಂಡು ನ್ಯಾಯಾಲಯಕ್ಕೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ವತ್ತಿನ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ನಿಪಿ.1 ಸೃಷ್ಟಿತ ದಾಖಲಾತಿ ಮೇರೆಗೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ**.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಅಧಿಕ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್ ಸಿ , ಗುಬ್ಬಿ.**